



## ವೀಕ್ಷಕರು ಮೂರ್ಖರಲ್ಲ

ಇತ್ತೀಚೆಗೆ ಝೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾದ 'ಬ್ರಹ್ಮಗಂಟು' ಧಾರಾವಾಹಿಯ ಒಂದು ಕಂತಿನಲ್ಲಿ ನಾಗಾಭರಣ, ಸೊಸೆ ಹಾಗೂ ಸಂಗಡಿಗರು 'ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್' ಕಾರ್ಯಕ್ರಮದಲ್ಲಿ ಭಾಗವಹಿಸುವ ದೃಶ್ಯಗಳು ಪ್ರಸಾರವಾದವು. ಅದರಲ್ಲಿ ನಾಗಾಭರಣ ಎದೆಯ ನೋವಿಗೆ ಕುಸಿದು ಬೀಳುವ ಪ್ರಸಂಗವಿದ್ದು ಅದನ್ನು ಮನೆಯಲ್ಲಿ ಕುಳಿತು ಟಿ.ವಿ ಯಲ್ಲಿ ನೋಡುತ್ತಿದ್ದ ಕುಟುಂಬದವರು ಗಾಬರಿಯಿಂದ ಎದ್ದು ನಿಲ್ಲುತ್ತಾರೆ.

ಆದರೆ ವೀಕ್ಷಕರಿಗೆ ಆ ಕಾರ್ಯಕ್ರಮ ನೇರ ಪ್ರಸಾರ ಆಗುವುದಿಲ್ಲ ಎಂದು ತಿಳಿದಿದೆ. ಕನಿಷ್ಠ 2–3 ದಿನಗಳ ಹಿಂದೆ ಚಿತ್ರೀಕರಣಗೊಂಡಿರುತ್ತದೆ. ಚಿತ್ರೀಕರಣದಲ್ಲಿ ಅಂತಹ ಅಪಾಯ ಎದುರಾದಾಗ ಮನೆಯವರಿಗೆ ಅದನ್ನು ತಿಳಿಸದೆ ಇರುತ್ತಾರೆಯೇ? ಇಂತಹ ಅಸಂಬದ್ಧ ಹಾಗೂ ಅತಿರೇಕಗಳ ಕತೆ ನಿಲ್ಲಲಿ. ತಾವು ಏನೇ ತೋರಿಸಿದರೂ ನೋಡುತ್ತಾರೆ ಎಂಬ ಮನೋಭಾವವನ್ನು ನಿರ್ದೇಶಕರು ತೊರೆಯಲಿ. ವೀಕ್ಷಕರಿಗೆ ಅನೇಕ ಆಯ್ಕೆಗಳಿವೆ. ಅವರು ಮೂರ್ಖರಲ್ಲ ಎಂಬುದು ನೆನಪಿರಲಿ.

– ಪತ್ತಂಗಿ ಎಂ. ಕೀರ್ತಿ, ಬೆಂಗಳೂರು

## ವಾರದ ಪತ್ರ

## ಪ್ರಶ್ನೆಗಳ ಮೌಲ್ಯದಲ್ಲಿ ಸಮಾನತೆ!

ನಟ ರಮೇಶ್ ಅರವಿಂದ್ ಸ್ಟಾರ್ ಸುವರ್ಣದಲ್ಲಿ ರಾತ್ರಿ ಒಂಬತ್ತರಿಂದ ನಡೆಸಿಕೊಡುವ 'ಕನ್ನಡದ ಕೋಟ್ಯಧಿಪತಿ' ಕುಟುಂಬ ಸಮೇತ ನೋಡಬಹುದಾದ ಮೌಲ್ಯಯುತ ಕಾರ್ಯಕ್ರಮ. ರಮೇಶ್ ಅವರು ಬಳಸುವ ಶುದ್ಧ ಕನ್ನಡದ ಭಾಷೆ, ನಡೆಸಿಕೊಡುವ ಪರಿ, ಅವರ ಆಂಗಿಕ ಭಾಷೆ, ವೈಯಕ್ತಿಕವಾಗಿ ಹೃದಯವಂತನಾಗಿ ನೀಡುವ ಕಾಣಿಕೆ ಅಚ್ಚುಮೆಚ್ಚು. ಪ್ರಶ್ನೆಗಳ ಉತ್ತರ ಹಾಗೂ ರಮೇಶ್ ಅವರು ನೀಡುವ ವಿವರಣೆ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ ಪೂರಕವಾದದ್ದು.

ಆದರೆ ಕನ್ನಡ ಅರಿತಿರುವ ಸ್ಪರ್ಧಾಳುಗಳು ಹಾಗೂ ಅವರ ಜೊತೆಗೆ ಆಗಮಿಸಿದವರಿಗೆ ಕನ್ನಡದಲ್ಲಿಯೇ ಮಾತನಾಡುವಂತೆ ಸೂಚನೆ ನೀಡಿದರೆ ಒಳ್ಳೆಯದಿತ್ತು. ಒಂದರಿಂದ ಐದರವರೆಗಿನ ಪ್ರಶ್ನೆಗಳು ಮೌಲ್ಯದಲ್ಲಿ ಸಮಾನವಾಗಿರದೆ ಕೆಲವರಿಗೆ ಅತಿ ಸರಳವಾಗಿ, ಕೆಲವರಿಗೆ ಕಠಿಣವಾಗಿರುವುದನ್ನು ಹೋಗಲಾಡಿಸಿದರೆ ಅರ್ಥಪೂರ್ಣವಾಗಿರುತ್ತಿತ್ತು.

– ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

## 'ಥಟ್ ಅಂಥ ಹೇಳಿ' ದಾಖಲೆ

ಚಂದನದ 'ಥಟ್ ಅಂಥ ಹೇಳಿ' ಕಾರ್ಯಕ್ರಮ 1500ಕ್ಕೂ ಹೆಚ್ಚು ಎಪಿಸೋಡುಗಳನ್ನು ಪೂರೈಸಿದೆ. ಭಾಗವಹಿಸಲು ಇಚ್ಛೆಯಿರುವವರು ಒಂದು ಪೋಸ್ಟ್ ಕಾರ್ಡಿನಲ್ಲಿ ಹೆಸರು, ವಿಳಾಸ ಬರೆದು ಕಳುಹಿಸಿದರೆ ಸಾಕು. ಈ ಕಾರ್ಯಕ್ರಮದಲ್ಲಿ ಕುಂದಾಪುರದ ಶ್ಯಾನುಭಾಗರ ಮನೆಯಿಂದ ಏಳು ಜನ ಸ್ಪರ್ಧಾಳುಗಳಾಗಿ ಭಾಗವಹಿಸಿದ್ದು ವಿಶೇಷ. 2007ರಲ್ಲಿ ಕುಟುಂಬದ ಹಿರಿಯ ಸದಸ್ಯರಾದ ಮಾಧವ ಶ್ಯಾನುಭಾಗರವರು ಭಾಗವಹಿಸಿದ್ದರೆ, ತದನಂತರ ಅವರ ಮಗ ವಸಂತ, ಸುಮಂತ, ಸೊಸೆ ಅಕ್ಷತಾ ಮತ್ತು ಸಾವಿತ್ರಿ, ಮಗಳಾದ ಶಾಂತಲಾ ಹೆಗ್ಡೆ ಭಾಗವಹಿಸಿದ್ದಾರೆ. ಸದ್ಯ ಅವರ ಪತ್ನಿ ವಿದ್ಯಾವತಿಯವರು ಭಾಗವಹಿಸಿದ್ದು ಇದು ಶೀಘ್ರವೇ ಚಂದನದಲ್ಲಿ ಮೂಡಿಬರಲಿದೆ.

– ಪುಷ್ಪಾ ಗಾಯತೊಂಡೆ, ಶಿರಸಿ

### ಭಯ

ಭಯವಿಲ್ಲ
ಗ್ರಹಣದಂದು
ಸೂರ್ಯ ಚಂದ್ರರಿಂದ
ಭಯವಾಗುತ್ತಿದೆ
ಇಲ್ಲದ್ದು ಹುಟ್ಟಿಸುವ
ಟಿವಿ ವಾಹಿನಿಯವರಿಂದ

– ದೇವಿದಾಸ
ಸುವರ್ಣ, ಅಂಕೋಲ

## ಎಲ್ಲ ಧಾರಾವಾಹಿಯಂತೆ ಆಗದಿರಲಿ..!

'ಮಗಳು ಜಾನಕಿ' ತನ್ನದೇ ಆದ ಕುತೂಹಲದ ಬೆಳವಣಿಗೆಯಿಂದ ವೀಕ್ಷಕರ ಮನ ಗೆದ್ದಿದೆ. ಟಿ ಎನ್. ಸೀತಾರಾಂ ಅವರು ಧಾರಾವಾಹಿಯ ಇಂಚು ಇಂಚು ಓಟದಲ್ಲೂ ಲೋಪದೋಷ ತಲೆದೋರದಂತೆ ಸೂಕ್ಷ್ಮವಾಗಿ ನಿರ್ದೇಶಿಸುತ್ತಾರೆ. ಆದರೆ ಆಗಸ್ಟ್ 14ರ ಎಪಿಸೋಡಿನಲ್ಲಿ ಲೋಪ ಇಣುಕಿದ್ದು ಅಚ್ಚರಿ ಮೂಡಿಸಿತು.

ರಾತ್ರಿ 12ಕ್ಕೆ ಬಾರ್ಗಿ ಭವ್ಯ ಬಂಗಲೆಯ ಮುಂದೆ ಜಾನಕಿಯ ಗೆಳತಿ ಲಕ್ಷ್ಮಿ ಕಾರಿನ ಹಾರ್ನ್ ಮಾಡಿದಾಗ ಜಾನಕಿ ಮನೆಯ ಬಾಗಿಲು ತೆಗೆದು ಹೊರಡುತ್ತಾಳೆ. ಒಂದು ಅಚ್ಚರಿ ಎಂದರೆ ಅರಮನೆಯಂತಹ ಬಂಗಲೆಗೆ ವಿಶಾಲ ಒಳ ಬಯಲು ಜಾಗ ಇರುವ ಕಾಂಪೌಂಡ್‌ನಲ್ಲಿ ಕಳ್ಳಕಾಕರು ಸುಳಿಯದಂತೆ ಒಂದು ನಾಯಿಯನ್ನೂ ಸಾಕಿ ಕಾವಲಿಗೆ ಇಟ್ಟಿರುವುದಿಲ್ಲ. ಅಲ್ಲಿ ಇದ್ದ ಒಬ್ಬ ಕಾವಲುಗಾರ ಹನ್ನೆರಡಕ್ಕೆ ನಿದ್ದೆ ಹೋಗಿರುತ್ತಾನೆ. ಕಾರಿನ ಶಬ್ದವನ್ನು ಕೇಳುವಷ್ಟು ಮತ್ತು ಅದು ಲಕ್ಷ್ಮಿಯ ಕಾರು ಎಂಬುದನ್ನು ಗುರುತಿಸುವಷ್ಟು ಮಾತ್ರ ಎಚ್ಚರ ಇರುತ್ತದೆ. ನಂತರ ಕೇವಲ ಐದು ನಿಮಿಷದಲ್ಲಿ ಜಾನಕಿ ಮನೆ ಬಾಗಿಲು ತೆಗೆದು ಗೇಟ್ ತೆಗೆದು ಹೋದದ್ದು ಗಮನಿಸಿಲ್ಲ ಎಂದರೆ? ಇನ್ನು ಮುಂದೆ ಇಂತಹ ಸಣ್ಣ ಪುಟ್ಟ ದೋಷಗಳು ನುಸುಳದೆ ಧಾರಾವಾಹಿಯ ಗುಣಮಟ್ಟವನ್ನು ನಿರ್ದೇಶಕರು ಕಾಯ್ದುಕೊಳ್ಳುತ್ತಾರೆ ಎಂದು ನಿರೀಕ್ಷಿಸುತ್ತೇವೆ

– ಸತ್ಯಬೋಧ, ಬೆಂಗಳೂರು

## ಗಟ್ಟಿ ಸಂಭಾಷಣೆಯ ಮಹಾಕಾಳಿ

ವಾರಾಂತ್ಯದಲ್ಲಿ ಬರುವ ಮಹಾಕಾಳಿಯಲ್ಲಿ ಪಾತ್ರಗಳ ಆಯ್ಕೆ, ಅವರ ಸಂಭಾಷಣಾ ಶೈಲಿ ಅತ್ಯುತ್ತಮವಾಗಿವೆ. ಸಂಭಾಷಣೆಗಳೇ ಇದರ ಗಟ್ಟಿತನ. ಇದು ಈಗಿನ ನಮ್ಮ ಜೀವನಶೈಲಿಗೆ ತುಂಬಾ ಹೆಚ್ಚಾಗಿ ಹೊಂದುವಂತಹದ್ದಾಗಿದೆ. ಸತಿಪತಿಯರ, ತಾಯಿ ಮಗನ ಸಂಬಂಧದ ಬಗ್ಗೆ, ದಂಪತಿಗಳ ನಂಬಿಕೆ, ನಿಷ್ಠೆಗಳ ಕುರಿತು ನಡೆಸುವ ಸಂಭಾಷಣೆಗಳು ಉತ್ಕೃಷ್ಟವಾಗಿವೆ. ಮಹಾದೇವನ ಪಾತ್ರವು ತುಂಬಾ ಗಂಭೀರತೆಯಿಂದ ಕೂಡಿದೆ. ಮಹಾಕಾಳಿಯ ಪಾತ್ರಧಾರಿ ತನ್ನ ಎರಡೂ ಪಾತ್ರಗಳಾದ ಪಾರ್ವತಿ ಮತ್ತು ಮಹಾಕಾಳಿಯನ್ನು ಚೆನ್ನಾಗಿ ನಿಭಾಯಿಸಿದ್ದಾರೆ. ಒಂದು ಸೌಮ್ಯ, ಇನ್ನೊಂದು ಮಹಾ ರೌದ್ರವನ್ನು ಚೆನ್ನಾಗಿ ಬಿಂಬಿಸಿದ್ದಾರೆ.

– ದಿವಾಕರ ನಾಯಕ

## ಸರಿಯಾದ ಬಣ್ಣದ ಆಯ್ಕೆ ಇರಲಿ

'ಥಟ್ ಅಂತ ಹೇಳಿ' ಕಾರ್ಯಕ್ರಮದಲ್ಲಿ ವೀಕ್ಷಕರು ತಾವು ಊಹಿಸಿದ ಉತ್ತರ ಸರಿಯಾಗಿದೆಯೋ ಇಲ್ಲವೋ ಎಂದು ಕಾತರದಿಂದ ಕಾಯುತ್ತಿರುತ್ತಾರೆ. ಆದರೆ ನಮೂದಿಸಿದ ಉತ್ತರದ ಆಯ್ಕೆ ಸರಿಯಾಗಿ ಕಾಣುವುದಿಲ್ಲ. ಅದಕ್ಕೆ ಕಾರಣ ಪದಗಳ ಹಿನ್ನೆಲೆಯಲ್ಲಿ ಕಾಣುವ ಬಣ್ಣ ಹೊಂದಾಣಿಕೆಯಾಗುವುದಿಲ್ಲ. ನೀಲಿ ಬಣ್ಣದ ಮೇಲೆ ಬಿಳಿ ಬಣ್ಣ ಚೆನ್ನಾಗಿ ಗೋಚರವಾಗುತ್ತದೆ. ಆದ್ದರಿಂದ ಸರಿಯಾದ ಬಣ್ಣದ ಆಯ್ಕೆ ಮಾಡುವುದು ಒಳ್ಳೆಯದು.

– ಸುಜಯ, ಬೆಂಗಳೂರು

## ಉಚ್ಚಾರಣೆ ಸರಿ ಇರಲಿ

ಝೀ ಕನ್ನಡದ 'ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಲಿಟಲ್ ಮಾಸ್ಟರ್ಸ್' ಚೆನ್ನಾಗಿ ಬರುತ್ತಿದೆ. ಮಕ್ಕಳು ಅಮೋಘವಾಗಿ ಅಭಿನಯಿಸುತ್ತಿದ್ದಾರೆ. ಆದರೆ ತೀರ್ಪುಗಾರರಲ್ಲಿ ರಕ್ಷಿತಾ ಅವರು 'ಹುಡುಗ' ಉಚ್ಚಾರಣೆಗೆ 'ಉಡುಗ.. ಉಡುಗ' ಹೇಳಿದ್ದು ಕೇಳಲು ನೋವಾಯಿತು. ಆದಷ್ಟು ಉಚ್ಚಾರಣೆ ಬಗ್ಗೆ ಗಮನವಿರಲಿ.

–ಸೀತಾ ಕೇಶವ, ಸಿದ್ದಿ